ಸಿ.ಸಿ.ನಂಃ 21/2021
ಪಿಡಬ್ಲ್ಯು-1

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾದ ದಿನಾಂಕ: 20-09-2022

ಮುಖ್ಯ ವಿಚಾರಣೆಃ ಶ್ರೀ ಕೆ ಬಿ ವಿ ವಕೀಲರಿಂದ

ನಾನು ಈ ಪ್ರಕರಣದಲ್ಲಿನ ಪಿರ್ಯಾದುದಾರನಿರುತ್ತೇನೆ. ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣೀಕೃತ ಹೇಳಿಕೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತದೆ.

ಆರೋಪಿಯು ದಿನಾಂಕಃ 17-11-2020 ರ ನನಗೆ ನೀಡಿರುವ ಚೆಕ್ಕನ್ನು ಹಾಜರು ಮಾಡಿದ್ದು ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ಆರೋಪಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ದಿನಾಂಕಃ 21-11-2020 ರಂದು ಕೆನರಾ ಬ್ಯಾಂಕಿನವರು ನೀಡಿದ ಹಿಂಬರಹವನ್ನು ಹಾಜರು ಮಾಡಿದ್ದು ನಿಪಿ-2 ಎಂದು ಗುರುತಿಸಲಾಯಿತು. ದಿನಾಂಕಃ 18-12-2020 ರಂದು ಆರೋಪಿಗೆ ವಕೀಲರ ಮುಖಾಂತರ ನೀಡಿದ ನೋಟೀಸಿನ ಕಚೇರಿ ಪ್ರತಿಯನ್ನು ಹಾಜರು ಮಾಡಿದ್ದು ನಿಪಿ-3 ಎಂದು ಗುರುತಿಸಲಾಯಿತು. ಅಂಚೆ ಸ್ವೀಕೃತಿಯನ್ನು ಹಾಜರು ಮಾಡಿದ್ದು ಅದನ್ನು ನಿಪಿ-3 ಎ ಎಂದು ಗುರುತಿಸಲಾಯಿತು. ನಿಪಿ-3 ಎ ರಲ್ಲಿ ಇರುವ ಆರೋಪಿಯ ಸಹಿಯನ್ನು ಆರೋಪಿ ವಕೀಲರ ಆಕ್ಷೇಪಿಸಿರುತ್ತಾರೆ.

ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.

ತ,ನ್ಯಾಸಾ.ಹೇ.ನನ್ನ.ಉ.ಬೆ. ಮಾಡಲಾಯಿತು.

ಓ.ಹೇ.ಕೇ.ಸ.ಇದೆ ಎಂದು ಒಪ್ಪಿರುತ್ತಾರೆ.

ಪ್ರ.ದ.ನ್ಯಾ ದಂ., ಸುಳ್ಯ.